ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸೂರ್ಯನಾರಣಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ಫಿಬ್ರುವರೀ 26ನೇ ತಾರೀಖಿನಲ್ಲಿ ಈ ಕೋರ್ಟು ವೇ.ಹರ್ ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲಗಳು.	ಗಿ. ಸಿ. ಮಾಡಿದ್ದಕ್ಕೆ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ರೂ.
1	ರುದ್ರಪಟ್ಣದಲ್ಲಿರುವ ವೆಂಕಟಸುಬ್ಬಯ್ಯ ..	400		ಆಧಾರದ ತಮಸೂಕು ಬಾಬತು	
2	ಸಾಲಿಗ್ರಾಮದಲ್ಲಿರುವ ಚನ್ನಪ್ಪಯ್ಯ ..	600		ಆಧಾರ ಭೋಗ್ಯದ ತಮಸೂಕು ಬಾಬತು	
3	ಡಿಟೋ ಗ್ರಾಮದ ಜಯಂಣ ..	800 1 3		ಡಿಕ್ರೀ ಬಾಬತು	
4	ಸಾಲಿಗ್ರಾಮದಲ್ಲಿರುವ ಕೃಷ್ಣಪ್ಪ ..	1,000		ಆಧಾರದ ತಮಸೂಕು ಬಾಬತು	
		2800 1 3			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ.

ಹಾಸನ ಡಿಸ್ಟ್ರಿಕ್ಟು.

ಹೊಳೇನರಸೀಪುರದ ಸಬ್ ಡಿವಿಜ್ಞ ಮುನಸಿಫ್ ಕೋರ್ಟಿನಲ್ಲಿ.

ಸ್ಯ 1886ನೇ ಇಸವಿ ಸಿವಿಲ್ ನಂಬರ್ 732.

ವಾದಿ.

ಹೊಳೇನರಸೀಪುರದ ಕಸಬು ಹೋಬಳಿ ನಾಗಲಪುರದಲ್ಲಿ ಇರುವ ಈರೇಗವ್ವಜನ ಮಗ ಬಸವೇಗವ್ವಜ.

ಪ್ರತಿವಾದೀರು.

1ನೇ ಬಳ್ಳಾರಿ ಜಿಲ್ಲಾ ನಾರಾಯಣದೇವರ ಕೆರೆಯಲ್ಲಿರುವ ಮುಕುಂದಭಟ್ಟ ರತೀರಮಣಾಚಾರ್, ದೌಹಿತ್ರ, ಮತ್ತು ಮೃತಪಟ್ಟ ಹೊಳೇನರಸೀಪುರದ ಕುರಡಿ ರಾಮಾಚಾರ್ ಹೆಂಡತಿ ಹನುಮಂತಬಾಯಿ ಪುರಫ್ ಕಮಲಾಬಾಯಿ

2ನೇ ಹೊಳೇನರಸೀಪುರದಲ್ಲಿರುವ ಸಾವಿತ್ರಮ್ಮ.

ಮೇಲೆ ಹೇಳಿರುವ 1ನೇ ಪ್ರತಿವಾದೀಗೆ— ಮೇಲ್ಕಂಡ ವಾದಿ ಬಸವೇಗವ್ವಜನು, ಮೃತಪಟ್ಟ ನಿಮ್ಮ ಗಂಡ ಬರದುಕೊಟ್ಟು ಇರುವ ಧಾಫಾ ತಮಸೂಕು ಬಾಬತು 118—12—3 ಪೈಗಳನ್ನ ಬರಮಾಡಿಸಿಕೊಡಬೇಕೆಂದು ನಿಮ್ಮ ಮೇಲೆ ವ್ಯಾಜ್ಯ ತಂದಿರುತ್ತಾರಾಗಿ ಈ ಕೋರ್ಟಿನಲ್ಲಿ ನೀವಾಗಲಿ, ಈ ವ್ಯಾಜ್ಯಕ್ಕೆ ಸಂಬಂಧಿಸಿದ ಮುಖ್ಯಗಳಾದ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಕ್ರಮಪ್ರಕಾರ ತಿಳಿಸಲ್ಪಟ್ಟ ಮತ್ತು ಸಮರ್ಥರಾದ ಅಥವಾ ಅಂಥಾ ದರೋಬಸ್ತು ಅಂಶಗಳಿಗೂ ಜವಾಬ್ ಹೇಳಲಿಕ್ಕೆ ಸಮರ್ಥನಾದ ಯಾವನಾದರೂ ಬಬ್ಬ ಇತರ ಮನುಷ್ಯನ ಸಂಗಡ ಬರುವ ಬಬ್ಬ ವಕೀಲನ ಮೂಲಕವಾಗಲಿ, ಸದರೀ ವಾದೀಗೆ ಜವಾಬ್ ಹೇಳಲಿಕ್ಕೆ ಈ ಕೋರ್ಟಿನಲ್ಲಿ ಸ್ಯ 1887ನೇ ಇಸವಿ ಮಾರ್ಚೀ 28ನೇ ಮಂಗಳವಾರ ಬೆಳಿಗ್ಗೆ 11 ಘಂಟೆಗೆ ಹಾಜರಾಗುವಂತೆ ಇದರ ದೆಸೆಯಿಂದ ನೀವು ಸಮ್ಮನ್ ಮಾಡಲ್ಪಟ್ಟಿರುವದಲ್ಲದೆ ಮೇಲೆ ನಮೂದಿಸಲ್ಪಟ್ಟ ದಿನದಲ್ಲಿ ನೀವು ಹಾಜರಾಗದೆ ಹೋದಲ್ಲಿ ನಿಮ್ಮ ಗೈರ್ ಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ಇಷ್ಯು ಮಾಡಲ್ಪಡುವದು.

ಸ್ಯ 1887ನೇ ಇಸವಿ ಮಾರ್ಚೀ ಮಾಹೆ 8ನೇ ಮಂಗಳವಾರದಲ್ಲಿ ನಮ್ಮ ದಸ್ತಖತ್ತುನಿಸೀ ಕೊಡಲ್ಪಟ್ಟಿತು.

ಸಿ. ಸುಬ್ಬರಾವ್,
ಮುನಸಿಫ್.